BUDGET ESTIMETS FOR 1974-75 DEMAND FOR GRANTS

Demand Nos. 34, 49 and 60 [*Debate Contd*]

†ಶ್ರೀ ಎನ್ ರಾಚಯ್ಯ (ಸಮಾಜ ಕಲ್ಯಾಣ ಶಾಖಾ ಸಚಿವರು) :—ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆಯ ೩೪, ೪೯ ಹಾಗೂ ೬೦ನೇ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರುಗಳು ಆದರಲ್ಲೂ ಶ್ರೀಮಾನ್ ಕಬಾಡಿಯವರು, ಶ್ರೀ ಕಾಗೋಡು ತಿಮ್ಮಪ್ಪನವರು, ಶ್ರೀ ಜಯಪ್ರಕಾಶನಾರಾಯಣ್‌ರವರು ಮತ್ತು ಶ್ರೀಮಾನ್ ದೊಡ್ಡತಿಮ್ಮಯ್ಯನವರು ಹಾಗೂ ಇತರ ಸದಸ್ಯರುಗಳು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಈ ಇಲಾಖೆಗಳ ಆಡಳಿತ ಕಾರ್ಯಕ್ರಮ ವಿಚಾರ ಮತ್ತು ಇದರಲ್ಲಿ ಯಾವ ರೀತಿಯಾದ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಹಾಗೂ ಇನ್ನು ಇತರ ವಿಚಾರಗಳಲ್ಲಿರುವ ಲೋಪ ದೋಷಗಳೇನು ಎನ್ನುವುದನ್ನು ಕೂಡ ಎತ್ತಿ ಹೇಳಿದ್ದಾರೆ. ಹಾಗೆ ಟೀಕೆ ಮಾಡುವಾಗ ರಚನಾತ್ಮಕವಾದ ಟೀಕೆಗಳನ್ನೂ ಮಾಡಿದ್ದಾರೆ ಈ ಎಲ್ಲಾ ಟೀಕೆಗಳನ್ನು ಹಾಗೂ ಸಲಹೆಗಳನ್ನೂ ನಾನು ಬಹಳ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಈ ಇಲಾಖೆಯ ಬಗ್ಗೆ ಇನ್ನೂ ಅನೇಕ ಮಾನ್ಯ ಸದಸ್ಯರುಗಳು ಇದರಲ್ಲಿ ಹೆಚ್ಚು ಹೆಚ್ಚಾಗಿ ಭಾಗ ವಹಿಸಬೇಕಾಗಿತ್ತು. ಇಂದು ನಮ್ಮ ದೇಶದಲ್ಲಿ ಸುಮಾರು ನೂರಕ್ಕೆ ಇಪ್ಪತ್ತೈದು ಭಾಗ ಹರಿಜನರು ಹಾಗೂ ಗಿರಿಜನರು ಯಾರು ಇದ್ದಾರೋ ಅವರಿಗೆ ರಾಜ್ಯಾಂಗದತ್ತವಾದ ರಕ್ಷಣೆಗಳನ್ನು ಎಲ್ಲಾ ಕ್ಷೇತ್ರಗಳಲ್ಲೂ, ಬಹಳ ಮುಂಖ್ಯವಾಗಿ ಶೈಕ್ಷಣಿಕ ಕ್ಷೇತ್ರ ಸಾಮಾಜಿಕ ಕ್ಷೇತ್ರ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ಕೊಡಬೇಕು. ಒಂದು ವಿಚಾರದಲ್ಲಿ ಹೆಚ್ಚಿನ ರಕ್ಷಣೆ ಹಾಗೂ ಸ್ಥಾನಗಳನ್ನು ಕೊಡಬೇಕಾಗಿತ್ತು ಎಂದು ನನಗನಿಸುವುದು, ಹರಿಜನರುಗಳಿಗೆ ರಕ್ಷಣೆ ಕೊಡುವ ವಿಚಾರದಲ್ಲಿ ಪ್ರಸ್ತಾಪ ಮಾಡುವಾಗ ಮಾನ್ಯ ಸದಸ್ಯರಾದಶ್ರೀ ಜಯಪ್ರಕಾಶನಾರಾಯಣ್‌ರವರು ಒಂದು ಮಾತು ಹೇಳಿದರು. ಯಾರು ನಿಷ್ಪವರ್ಗದಿಂದ ಬಂದಿರುವ ಮೂರು ಜನ ಮಂತ್ರಿಗಳಾಗಿದ್ದಾರೋ, ಅವರುಗಳು ಈ ದೇಶದಲ್ಲಿ ಇರುವ ಹಿಂದುಳಿದ ವರ್ಗಗಳವರಿಗೆ ಸಾಮಾಜಿಕ ನ್ಯಾಯವನ್ನು ದೊರೆಕಿಸಿಕೊಡುವುದರಲ್ಲಿ ರಾಜ್ಯಾಂಗದತ್ತವಾಗಿ ಆಗದೇ ಹೋದರೆ ನಾವೆಲ್ಲರೂ ರಾಜೀನಾಮೆ ಕೊಡಬೇಕು ಎನ್ನುವ ಮಾತನ್ನೂ ಹೇಳಿದ್ದಾರೆ. ನಾನು ಈ ಸಭೆಯ ಮೂಲಕ ಮಾನ್ಯ ಸದಸ್ಯರಿಗೆ ಹಾಗೂ ನೊಂದ ಹರಿಜನ ವರ್ಗದವರಿಗೆ ಹಾಗೂ ಹಿಂದುಳಿದವರಿಗೆ ರಾಜ್ಯಾಂಗದತ್ತವಾದ ಅನುಕೂಲಗಳನ್ನು ಒದಗಿಸಿಕೊಡುವುದರಲ್ಲಿ ಆಸಕ್ತಿ ವಹಿಸಿ ಅವರಿಗೆ ನ್ಯಾಯವನ್ನು ದೊರಕಿಸಿಕೊಡಲು ಈ ಸರಕಾರದಲ್ಲಿ ಆಗದಿದ್ದ ಪಕ್ಷದಲ್ಲಿ ನಮ್ಮ ಸ್ಥಾನ ಮಾನಗಳನ್ನು ನಾವು ಬಿಡುವುದಕ್ಕೆ ಎಲ್ಲರೂ ತಯಾರಾಗಿದ್ದೇವೆ ಎನ್ನುವ ಭರವಸೆಯನ್ನು ಅವರಿಗೆ ಕೊಡುತ್ತೇನೆ. ಆದರೆ ತಮಗೇ ಗೊತ್ತಿದೆ ಇಲ್ಲಿನ ತಕ್ಕ ಜನರು ಯಾರೂ ಅಧಿಕಾರಕ್ಕಾಗಿ ಅಂಟಿಕೊಂಡು ಇರಬೇಕಾದವರಲ್ಲ ಎಂದು ಸ್ಪಷ್ಟವಾಗಿ ಇಲ್ಲಿ ಹೇಳುತ್ತೇನೆ ದೇಶದಲ್ಲಿ ಎಲ್ಲ ವರ್ಗದವರು ಇರುವ ಹಾಗೆ ಬಡವರು ಹಾಗೂ ಹರಿಜನರು ನೂರಕ್ಕೆ ೯೦ ರಷ್ಟು ಇದ್ದಾರೆ. ಹರಿಜನರ ಹಾಗೂ ಗಿರಿಜನರ ಪುರೋಭಿವೃದ್ಧಿ ಹಾಗೂ ಅವರ ಇತರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ನಾವು ಚಿನ್ನಾಗಿ ಕೆಲಸಮಾಡಬೇಕೆಂಬುದನ್ನೂ ಅರಿತುಕೊಂಡಿದ್ದೇವೆ ಶ್ರೀಮಾನ್ ದೊಡ್ಡತಿಮ್ಮಯ್ಯನವರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ, ಇದೊಂದು ದೊಡ್ಡ ಸಮಸ್ಯೆ ಇದು ಯಾವ ಒಂದು ಪಂಗಡ ಅಥವಾ ಜಾತೀಗೆ ಸೇರಿದ ಹಾಗೂ ಒಂದು ಪಕ್ಷದ ಸಮಸ್ಯೆಯಲ್ಲ ಈ ಒಂದು ಕಾರಣದಿಂದ ಈ ಸಮಸ್ಯೆಗಳನ್ನು ರಾಷ್ಟ್ರೀಯ ಸಮಸ್ಯೆಗಳು ಎಂದು ನಾವು ಹೇಳುತ್ತಿದ್ದೇವೆ,

ಲೋನ್ಸ್, ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ ಅಲ್ಲದೇ ಹಣವನ್ನು ವಾಪಸ್ ಪಡೆಯುವುದಕ್ಕೆ ಕಾಯಿದೆಯ ಮುಖಾಂತರ ಅವಕಾಶ ಇದೆ. ಕರ್ನಾಟಕ ರಾಜ್ಯದಲ್ಲಿ ಇದರಿಂದ ರೈತರಿಗೂ ಮತ್ತು ಬ್ಯಾಂಕ್‌ನವರಿಗೂ ಖಾತ್ರಿಯಾಗಿ ಅವರ ಹಣವನ್ನು ವಾಪಸ್ ಪಡೆಯುವುದಕ್ಕೂ ಉತ್ಸಾಹ ಬರುತ್ತದೆ ಎನ್ನುವ ದೃಷ್ಟಿಯಿಂದ ಈ ಒಂದು ಯೋಜನೆಯನ್ನು ನಾವು ತಂದಿದ್ದೇವೆ. ಇದರಲ್ಲಿ ತೊಂದರೆಯಾಗುವಂಥದ್ದು ಯಾವುದು ಇಲ್ಲ ಕಮರ್ಷಿಯಲ್ ಬ್ಯಾಂಕ್‌ಗಳು ರೈತರಿಗೆ ಹೆಚ್ಚು ಹೆಚ್ಚಾಗಿ ಸಾಲ ಕೊಡುವುದಕ್ಕೆ ಮುಂದೆ ಬರುವಂತಕ್ಕ ಕಾಯಿದೆಯಲ್ಲ ಇದಕ್ಕೆ ತಕ್ಕ ಅವಕಾಶಗಳನ್ನು ಮಾಡಿಕೊಟ್ಟರೆ ಒಳ್ಳೆಯದೆಂದು ಎಂದು ಇದನ್ನು ಮಾಡಿದ್ದೇವೆ. ರೈತನು ತನ್ನ ಆರ್ಥಿಕ ಸಮಸ್ಯೆಯನ್ನು ಉತ್ತಮಪಡಿಸಿಕೊಳ್ಳುವುದಕ್ಕೋಸ್ಕರ ಇದನ್ನು ತಂದಿದ್ದೇವೆ, ಮಾನ್ಯ ಸದಸ್ಯರಾದ ಶಾಮಣ್ಣನವರಿಗೆ ಇದರ ಬಗ್ಗೆ ಕೆಲವಾರು ಅನುಮಾನಗಳು ಇದ್ದುವು, ಅವೂ ಬಗೆಹರಿದು ಅವರೂ ಸಹ ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಇದನ್ನು ಸ್ವಾಗತಿಸುತ್ತಾರೆ ಎಂದು ನಾನಾದರೂ ಭಾವಿಸುತ್ತೇನೆ. ತಮ್ಮ ಮೂಲಕ ಈ ಮಸೂದೆಯನ್ನು ಮಾನ್ಯ ಸದಸ್ಯರು ಸರ್ವಾನುಮತದ ಒಪ್ಪಿಗೆಯಿಂದ ಅಂಗೀಕರಿಸಬೇಕು ಎಂದು ಕೇಳಿಕೊಳ್ಳುತ್ತೇನೆ,

ಶ್ರೀ ಕೆ.ಎಚ್. ಹನುಮೇಗೌಡ :—ಕಾಲಂ ೧೨ರಲ್ಲಿ ಇದು ರಿಕವರಿ ಆಫ್ ಡ್ಯೂಸ್‌ಗೆ ಸಂಬಂಧ ಪಟ್ಟಿದ್ದು. ಇದರ ಪ್ರಕಾರ ಎನ್‌ಕ್ವಯರಿ ಆಫೀಸರ್ ಒಬ್ಬರು ಇರುತ್ತಾರೆ. ಅವರು ಎಲ್ಲಿಯೋ ಕೂತು ಕೊಂಡು ಎನ್‌ಕ್ವಯರಿ ಮಾಡಿದಮೇಲೆ ರಿಪೋರ್ಟ್ ಕೊಡುತ್ತಾರೆ ಕೊನೆಯಲ್ಲಿ "and on its furnishing a Statement of accounts in respect of the arrears, the prescribed officer may after making such enquiries as he deems fit, grant a certificate for the recovery of the amount stated therein to be due." ಎಂದು ಇದೆ. ನಾನು ಇಲ್ಲಿ ಒಂದು ಸಲಹೆಯನ್ನು ಮಾಡುತ್ತೇನೆ, ಅವರು ಸ್ಥಳದಲ್ಲಿಯೇ ಹೋಗಿ ಎನ್‌ಕ್ವಯರಿ ಮಾಡಬೇಕು. ಎಲ್ಲಿಯೋ ಕೂತುಕೊಂಡು ಎನ್‌ಕ್ವಯರಿ ಮಾಡಿದೆ ಎಂದು ರಿಪೋರ್ಟ್ ಕೊಟ್ಟು ಆಮೇಲೆ ಎಕ್ಸ್‌ಪಾರ್ಟಿಡಿಕ್ರಿಯಾಗುತ್ತದೆ, ಆಮೇಲೆ ಹರಾಜುಮಾಡುತ್ತಾರೆ ಇದನ್ನು ತಪ್ಪಿಸುವ ಸಲುವಾಗಿ, ಎನ್‌ಕ್ವಯರಿ ಮಾಡುವ ಸಮಯದಲ್ಲಿ ಸಂಬಂಧಪಟ್ಟ ರೈತರಿಗೆ ಸಮನಾದ ಅವಕಾಶಕೊಟ್ಟು, ಸ್ಥಳದಲ್ಲಿಯೇ ಎನ್‌ಕ್ವಯರಿ ಮಾಡಬೇಕು ಎಂದು ನಾನು ಈ ಒಂದು ಅಮೆಂಡ್‌ಮೆಂಟ್ ಅನ್ನು ಸೂಚನೆ ಮಾಡುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) — ಕ್ಲಾಸ್ ೧೨ ಸಬ್ ಕ್ಲಾಸ್ (೧)ರಲ್ಲಿ ಕೆಲವು ಪದಗಳನ್ನು ಹೊಸದಾಗಿ ಸೇರಿಸಿದ್ದಾರೆ. ನಾನು ಸೂಚಿಸುವುದನ್ನು ಸೇರಿಸಿಕೊಂಡರೆ ನಮಗೆ ಇರತಕ್ಕ ಭಯ ಪರಿಹಾರ ವಾಗುತ್ತದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಇಲ್ಲಿ

> "On an application made by a credit agency for the recovery of arrears of any sum due to it by an agriculturist towards the financial assistance given to him and on its furnishing a statement of accounts in respect of the arrears, the prescribed .." ಎಂದು ಇದೆ ಇದನ್ನು
>
> "after giving a reasonable opportunity to the agriculturist at the spot may grant a certificate". ಎಂದು ಮಾಡಿದರೆ ಅನುಕೂಲವಾಗುತ್ತದೆ ಇದನ್ನು ಮಾಡುವುದರಿಂದ ಏನಾಗುತ್ತದೆ ಎಂದರೆ, ಸೊಸೈಟಿಯ, ಆರ್ಬಿಟ್ರೇಟರ್ಸ್, ಎಲ್ಲಿಯೋ ಕೂತು ಕೊಂಡು ಇರುತ್ತಾರೆ ನೋಟೀಸ್ ಕೊಟ್ಟಿರುವುದು ಸಾಲ ತೆಗೆದುಕೊಂಡಿರುವವನಿಗೆ ಗೊತ್ತಾಗುವುದಿಲ್ಲ. ನೋಟೀಸ್ ಸೊಸೈಟಿಗೆ ಹೋಗುತ್ತದೆ ಇವರು ನೋಟೀಸ್ ಸರ್ವ್ಡ್, ಡಿಕ್ರಿ ಪಾಸ್ಡ್ ಎಕ್ಸ್‌ಪಾರ್ಟಿ ಎಂದು ಬರೆದುಕೊಂಡು ಬಿಡುತ್ತಾರೆ. ಸಾಲ ತೆಗೆದುಕೊಂಡಿರುವವನಿಗೆ, ಜಫ್ತಿಗೆ ಬಂದಮೇಲೆ ಇದು ಗೊತ್ತಾಗುತ್ತದೆ ಸಾಲ ತೆಗೆದುಕೊಂಡಿರುವವರು ಅನೇಕ ಸಂದರ್ಭಗಳಲ್ಲಿ ಹಣ ವಾಪಸ್ ಕೊಟ್ಟು ರಸೀತಿ ಪಡೆದಿದ್ದರೂ ಯಾವುದೋ ಕಾರಣದಿಂದ ಲೆಕ್ಕದಲ್ಲಿ ಇದರ ಜಮಾ ಅನ್ನು ತೆಗೆದುಕೊಂಡಿರುವುದಿಲ್ಲ, ಬಹಶಃ ಕೈ ರಸೀತಿಯನ್ನು ಕೊಟ್ಟಿರಬಹುದು, ಲೆಕ್ಕದಲ್ಲಿ ಜಮಾ ತೆಗೆದುಕೊಂಡಿರುವುದಿಲ್ಲ. ಇಂಥ ಅನೇಕ ದೃಷ್ಟಾಂತಗಳು ಇರುತ್ತವೆ. ಆದ್ದರಿಂದ ಸಾಲವನ್ನು ತೆಗೆದುಕೊಂಡಿರುವ ರೈತರಿಗೆ ಎನ್‌ಕ್ವಯರಿ ಸಮಯದಲ್ಲಿ ಒಂದು ಸಮಾಧಾನ ಹೇಳುವುದಕ್ಕೆ ಅವಕಾಶ ಕೊಟ್ಟಿರೆ, ಅವನು ಹಣವನ್ನು ವಾಪಸ್ ಕೊಟ್ಟಿದ್ದರೆ ರಸೀತಿಯನ್ನು ಹಾಜರ್ಪಡಿಸಬಹುದು ಅಥವಾ ಯಾವುದಾದರೂ ಒಂದು ಸಮಾಧಾನವನ್ನು ಇವರಿಗೆ ಅವನುಹೇಳಬಹುದು ಆದ್ದರಿಂದ ಎನ್‌ಕ್ವಯರಿ ಆಫೀಸರ್ ಅವರು ಸತ್ಯಾಂಶವನ್ನು ತಿಳಿದುಕೊಂಡು ಕೆಲಸ ಮಾಡಿದರೆ ತೊಂದರೆ ಬರುವುದಿಲ್ಲ. ಏಕೆಂದರೆ, ಅನೇಕ ಸೊಸೈಟಿಗಳಲ್ಲಿ ಇಂಥ ವ್ಯವಹಾರಗಳನ್ನು ದಿನನಿತ್ಯ ನೋಡುತ್ತಿದ್ದೇವೆ. ಸಬ್‌ಕ್ಲಾಸ್ (೨)ರಲ್ಲಿ, "A certificate by the prescribed officer under sub-section (1) shall be final and conclusive as to the arrears due The arrears stated to be due therein shall be recoverable as if it were an arrear of land revenue" ಎಂದು ಇದೆ. ಇಲ್ಲಿ ಸಾಲ ತೆಗೆದುಕೊಂಡಿರುವವರಿಗೆ ನೋಟೀಸ್ ಹೋಗದೆ ಇರಬಹುದು, ಅವನಿಗೆ ಇದರ ತಿಳುವಳಿಕೆ ಇಲ್ಲದೆ ಇರಬಹುದು. ಇಲ್ಲಿ ಪುನಃ ಅಪೀಲು ಹೋಗುವುದಕ್ಕೆ ಅವಕಾಶ ಇಲ್ಲ. ಪ್ರಿಸ್ಕ್ರೈಬ್ಡ್ ಆಫೀಸರ್ ಅವರು ಸರ್ಟಿಫಿಕೇಟ್ ಕೊಡುವ ಸಮಯದಲ್ಲಿ ಇಂಥ ಅವಕಾಶಗಳಿಂ ಇದ್ದರೆ ಇಂಥ ತೊಂದರೆಗಳು ತಪ್ಪುತ್ತದೆ. ಅನೇಕ ಸಾರಿ ದಂಡ್ಡಾಕೊಟ್ಟು, ಅವಾರ್ಡ್ ಎಕ್ಸಿಕ್ಯೂಟ್ ಆಗತಕ್ಕ ಸಮಯದಲ್ಲಿ ರೈತರು ಅಳುತ್ತಾ ಬಂತಕ್ಕದನ್ನು ನಾವು ನೋಡಿದ್ದೇವೆ. ಯಾರೋ ಹೆಸರಿನಲ್ಲಿ ಸಾಲಇರುತ್ತದೆ, ಸೆಕ್ರೆಟರಿ, ಅಧ್ಯಕ್ಷರು ಏನು ಮಾಡುತ್ತಾರೆಂದರೆ, ಇವರಿಗೆ ನೋಟೀಸ್ ಹೋದರೂ ಸಾಲ ತೆಗೆದುಕೊಂಡವರಿಗೆ ಗೊತ್ತಾಗುವುದಿಲ್ಲ. ಸುಮ್ಮನಿರುತ್ತಾರೆ. ಎಕ್ಸಿಕ್ಯೂಟ್ ಆಗತಕ್ಕ ಸಮಯದಲ್ಲಿ ಇದು ಅವರಿಗೆ ಗೊತ್ತಾಗುತ್ತದೆ ನಮ್ಮ ಅವಿದ್ಯಾವಂತ ರೈತರನ್ನು ಉಳಿಸುವುದಕ್ಕೋಸ್ಕರ

ನಾನು ಈ ಒಂದು ಸಲಹೆಯನ್ನು ಮಾಡುತ್ತೇನೆ ಇದನ್ನು ಅಮೆಂಡ್‌ಮೆಂಟ್‌ನಲ್ಲಿ ಇನ್‌ಕಾರ್ಪೊರೇಟ್ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್ ಚಿಕ್ಕೇಗೌಡ.— ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂಥ ಅಮೆಂಡ್‌ಮೆಂಟಿನಲ್ಲಿ ನ್ಯಾಚುರಲ್ ಜಸ್ಟೀಸ್ ಇದೆ. We have no objection to accept it.

ಶ್ರೀ ಕೆ. ಎಚ್. ಹನುಮೇಗೌಡ.— ತಮ್ಮ ಮಸೂದೆಯು ಪ್ರಕಾರ, ಸಾಲ ತೆಗೆದುಕೊಂಡ ರೈತರು, ಸಾಲವನ್ನು ಕೊಡದೆ ಹೋದ ಸಂದರ್ಭದಲ್ಲಿ ಬ್ಯಾಂಕ್‌ನವರು ಅವರ ಜಮೀನನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಾರೆ. ಅವರು ಐದು ವರ್ಷವಾದಮೇಲೆ ಪುನಃ ಮಾರಾಟಮಾಡಿಕೊಳ್ಳಬಹುದೆಂ ಎನ್ನುವ ಪ್ರಾವಿಷನ್ ಈ ಬಿಲ್ಲಿನಲ್ಲಿದೆ. ಇಲ್ಲಿ ನಾನು ಒಂದು ಸೂಚನೆ ಮಾಡುತ್ತೇನೆ. ಏನೆಂದರೆ, ಐದು ವರ್ಷದೊಳಗೆ ರೈತರು ಸಾಲ, ಬಡ್ಡಿ ಎರಡನ್ನೂ ವಾಪಸ್ ಕೊಡುತ್ತೇವೆಂದು ಹೇಳಿದರೆ ಭೂಮಿಯನ್ನು ವಾಪಸ್ ಕೊಡಿ, ಎಂದು ಇದಕ್ಕೆ ಅವಕಾಶ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

Madam SPEAKER.— I will put the consideration motion to the vote of the House. The question is:

"That the Karnataka Agricultural Credit Operations and Miscellaneous Provisions Bill, 1974, be taken into consideration."

The motion was adopted.

10-30 A.M.

Madam SPEAKER.— Clause by clause consideration of the Bill will be taken up on some other day. Now, the next Bill may be moved by the Hon. Minister for Transport and Housing.

KARNATAKA MOTOR VEHICLES TAXATION (AMENDMENT) BILL, 1974, MOTION TO CONSIDER

SRI K. H. RANGANATH (Minister for Transport and Housing) I move.

"That the Karnataka Moter Vehicles Taxation (Amendment) Bill, 1974, be taken into consideration."

Madam SPEAKER. — Motion moved

"That the Karnataka Motor Vehicles Taxation (Amendment) Bill, 1974 be taken into consideration."

† SRI K. H. RANGANATH.— Madam Speaker, this is a very small measure seeking to amend clause 2, part A of the Schedule to the Karnataka Motor Vehicles Taxation Act. This measure is brought forward with a view to raising the resources of the State as was announced by the Hon. Finance Minister during his Budget Speech.